# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 437(600)

ಸದಸ್ಯರ ಹೆಸರು : ಶ್ರೀ ಹೆಚ್.ಎಸ್.ಗೋಪಿನಾಥ್
( ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಉತ್ತರಿಸಬೇಕಾದ ದಿನಾಂಕ : 11.12.2025

ಉತ್ತರಿಸುವ ಸಚಿವರು : ಮುಖ್ಯಮಂತ್ರಿಗಳು

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯ ಸರ್ಕಾರವು 2025ರ ಸೆಪ್ಟೆಂಬರ್ 4 ರಂದು ಹೊರಡಿಸಿರುವ ಆದೇಶದಂತೆ (ಸರ್ಕಾರದ ಸುತ್ತೋಲೆ ಸಂಖ್ಯೆ: ಸಿಆಸುಇ: 388; ಸೇನಿನಿ: 2024 ಭಾ-02) ತಿದ್ದುಪಡಿ ಅಧಿಸೂಚನೆಗಳನ್ನು ಮಾಡಿದ ನೇಮಕಾತಿ ಅಧಿಸೂಚನೆಗಳನ್ನು ರದ್ದುಪಡಿಸಬೇಕೆಂದು ಆದೇಶ ಹೊರಡಿಸಿರುವುದು ನಿಜವೇ, ಹಾಗಿದ್ದಲ್ಲಿ, ತಿದ್ದುಪಡಿ ಅಧಿಸೂಚನೆ ದಿನದ ಕುರಿತು ಗೊಂದಲವಿರುವುದರಿಂದ ಈ ಬಗ್ಗೆ ಸ್ಪಷ್ಟನೆಯನ್ನು ನೀಡುವುದು; | ದಿನಾಂಕ: 04.09.2025 ರಂದು ನಡೆದ ಸಚಿವ ಸಂಪುಟ ಸಭೆಯಲ್ಲಿ ಈ ಕೆಳಕಂಡಂತೆ ನಿರ್ಣಯಿಸಲಾಗಿರುತ್ತದೆ.<br><br>**"ದಿನಾಂಕ:28.10.2024ರ ನಂತರ ಸರ್ಕಾರದ ಯಾವುದೇ ಇಲಾಖೆ/ಮಂಡಳಿ/ನಿಗಮ/ಸ್ವಾಯತ್ತ ಸಂಸ್ಥೆಗಳ ಹುದ್ದೆಗಳಿಗೆ ನೇರ ನೇಮಕಾತಿಗಾಗಿ ಸಂಬಂಧಿಸಿದ ನೇಮಕಾತಿ ಪ್ರಾಧಿಕಾರಗಳು ಹೊರಡಿಸಿದ ಅಧಿಸೂಚನೆಗಳನ್ನು ರದ್ದುಗೊಳಿಸಿ, ಪರಿಶಿಷ್ಟ ಜಾತಿ ಒಳಮೀಸಲಾತಿಯನ್ನು ಅಳವಡಿಸಿಕೊಂಡು ಕಾಲಬದ್ಧವಾಗಿ (Time Bound) ಹೊಸದಾಗಿ ನೇಮಕಾತಿ ಅಧಿಸೂಚನೆ ಹೊರಡಿಸಬೇಕೆಂದು ಸಚಿವ ಸಂಪುಟವು ತೀರ್ಮಾನಿಸಿತು.**<br><br>**ಮುಂದುವರೆದು, ದಿನಾಂಕ: 28.10.2024ರ ಹಿಂದೆ ನೇರ ನೇಮಕಾತಿಗಾಗಿ ಅಧಿಸೂಚನೆ ಹೊರಡಿಸಿ, ದಿನಾಂಕ: 28.10.2024ರ ನಂತರ ಸರ್ಕಾರದ ಯಾವುದೇ ಇಲಾಖೆ/ಮಂಡಳಿ/ನಿಗಮ/ಸ್ವಾಯತ್ತ ಸಂಸ್ಥೆಗಳ ಹುದ್ದೆಗಳಿಗೆ ನೇರ ನೇಮಕಾತಿಗಾಗಿ ಸಂಬಂಧಿಸಿದ ನೇಮಕಾತಿ ಪ್ರಾಧಿಕಾರಗಳು ಯಾವುದಾದರೂ ತಿದ್ದುಪಡಿ ಅಧಿಸೂಚನೆಗಳನ್ನು ಹೊರಡಿಸಿದ್ದಲ್ಲಿ, ಅಂತಹ ಎಲ್ಲಾ ನೇಮಕಾತಿ ಅಧಿಸೂಚನೆಗಳನ್ನೂ ಸಹ ರದ್ದುಗೊಳಿಸಿ, ಪರಿಶಿಷ್ಟ ಜಾತಿ ಒಳ ಮೀಸಲಾತಿಯನ್ನು ಅಳವಡಿಸಿಕೊಂಡು ಹೊಸದಾಗಿ ನೇಮಕಾತಿ ಅಧಿಸೂಚನೆ ಹೊರಡಿಸಬೇಕೆಂದೂ ಸಹ ಸಚಿವ ಸಂಪುಟವು ತೀರ್ಮಾನಿಸಿತು."**<br><br>ಈ ಮೇಲ್ಕಂಡ ದಿನಾಂಕ:04-09-2025ರ ಸಚಿವ ಸಂಪುಟದ ನಿರ್ಣಯದಂತೆ ಸುತ್ತೋಲೆ ಸಂಖ್ಯೆ: ಸಿಆಸುಇ 388 ಸೇನಿನಿ 2024 ಭಾಗ-3 ದಿನಾಂಕ:04.09.2025ನ್ನು ಹೊರಡಿಸಲಾಗಿರುತ್ತದೆ(ಅನುಬಂಧ-1). |
| (ಆ) | ಈ ಆದೇಶದ ಅನುಸಾರ ಯಾವ ಯಾವ ನೇಮಕಾತಿ ಅಧಿಸೂಚನೆಗಳನ್ನು ರದ್ದುಪಡಿಸಲು ನಿರ್ಧರಿಸಲಾಗಿದೆ: (ವಿವರ ನೀಡುವುದು) | ರಾಜ್ಯ ಸರ್ಕಾರವು ದಿನಾಂಕ:04-09-2025ರಂದು ಹೊರಡಿಸಿರುವ ಆದೇಶದ ಅನುಸಾರ ರದ್ದುಪಡಿಸಲು ನಿರ್ಧರಿಸಲಾಗಿರುವ ನೇಮಕಾತಿ ಅಧಿಸೂಚನೆಗಳ ತಃಖ್ತೆಯನ್ನು ಇದರೊಂದಿಗೆ ಲಗತ್ತಿಸಿದೆ(ಅನುಬಂಧ-2). |
| (ಇ) | ಈ ಆದೇಶ ಅನುಸಾರ ಕೆ.ಎ.ಎಸ್ ಮುಖ್ಯ ಪರೀಕ್ಷೆಯ ಕುರಿತಾಗಿ ಎರಡು ಬಾರಿ ತಿದ್ದುಪಡಿ ಅಧಿಸೂಚನೆಗಳಾಗಿರುವುದರಿಂದ ಪ್ರಸ್ತುತ ಚಾಲ್ತಿಯಲ್ಲಿರುವ ಕೆ.ಎ.ಎಸ್ ನೇಮಕಾತಿಯನ್ನು ಕೂಡ ರದ್ದುಪಡಿಸಲಾಗುತ್ತಿದೆಯೇ:<br>ರದ್ದುಪಡಿಸದಿದ್ದಲ್ಲಿ, ಸರ್ಕಾರದ ಸುತ್ತೋಲೆಯನ್ನು ಉಲ್ಲಂಘಿಸಿದಂತೆ ಆಗುವುದಿಲ್ಲವೇ? (ವಿವರ ನೀಡುವುದು) | ಕೆಪಿಎಸ್‌ಸಿ ನಡೆಸುತ್ತಿರುವ ಗೆಜೆಟೆಡ್ ಪ್ರೊಬೇಷನರ್ 2023-24ನೇ ಸಾಲಿನ ಒಟ್ಟು 384 ಹುದ್ದೆಗಳ ನೇಮಕಾತಿ ಪ್ರಕ್ರಿಯೆಯನ್ನು ಕರ್ನಾಟಕ ಗೆಜೆಟೆಡ್ ಪ್ರೊಬೇಷನರ್ (ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ ನೇಮಕಾತಿ) ನಿಯಮಗಳು 1997 ಹಾಗೂ ತಿದ್ದುಪಡಿ ನಿಯಮಗಳನ್ವಯ ಜರುಗಿಸಲಾಗುತ್ತಿದ್ದು ಸದರಿ ನೇಮಕಾತಿಯು ಪೂರ್ವಭಾವಿ, ಮುಖ್ಯ ಪರೀಕ್ಷೆ ಮತ್ತು ವ್ಯಕ್ತಿತ್ವ ಪರೀಕ್ಷೆಯ ಮೂರು ಹಂತಗಳನ್ನು ಒಳಗೊಂಡಿರುತ್ತದೆ.<br>ಸದರಿ ನೇಮಕಾತಿಗೆ ಆಯೋಗವು ಅಧಿಸೂಚನೆ ಸಂಖ್ಯೆ: ಪಿಎಸ್‌ಸಿ 509ಇ(1)/2023-24 ದಿನಾಂಕ:26-02-2024 ರಂದು ಮೂಲ ಅಧಿಸೂಚನೆಯನ್ನು ಹೊರಡಿಸಿರುತ್ತದೆ. ತದನಂತರದಲ್ಲಿ ಸದರಿ ಪೂರ್ವಭಾವಿ ಪರೀಕ್ಷೆಗೆ ಸಂಬಂಧಿಸಿದಂತೆ ಈ ಕೆಳಕಂಡಂತೆ ತಿದ್ದುಪಡಿ/ ಸೇರ್ಪಡೆ ಅಧಿಸೂಚನೆಗಳನ್ನು ಹೊರಡಿಸಲಾಗಿರುತ್ತದೆ. |

| ತಿದ್ದುಪಡಿ/ಸೇರ್ಪಡೆ ಅಧಿಸೂಚನೆಯ ದಿನಾಂಕ | ತಿದ್ದುಪಡಿ/ಸೇರ್ಪಡೆ ಅಧಿಸೂಚನೆಗಳ ಸ್ವರೂಪ |
|---|---|
| ತಿದ್ದುಪಡಿ ಅಧಿಸೂಚನೆ-1 ಪಿಎಸ್ ಸಿ 03 ಇ(1)/2024-25, ದಿನಾಂಕ:02-04-2024 | ಒಟ್ಟು ಹುದ್ದೆಗಳ ಸಂಖ್ಯೆ ಮತ್ತು ಹುದ್ದೆಗಳ ಹೆಸರಿನಲ್ಲಿ ತಿದ್ದುಪಡಿಯ ಕುರಿತು. |
| ತಿದ್ದುಪಡಿ ಅಧಿಸೂಚನೆ -2 ಪಿಎಸ್ ಸಿ 20 ಇ(1)/2024-25, ದಿನಾಂಕ:19-04-2024 | ಪೂರ್ವಭಾವಿ ಪರೀಕ್ಷೆಯ ದಿನಾಂಕವನ್ನು ಮುಂದೂಡುವ ಕುರಿತು. |
| ತಿದ್ದುಪಡಿ ಅಧಿಸೂಚನೆ-3 ಪಿಎಸ್‌ಸಿ140ಇ(1)/2024-25,ದಿನಾಂಕ:06-07-2024 | 21-06-2024 ರ ಸರ್ಕಾರಿ ಆದೇಶದ ಪ್ರಕಾರ 2017-18 ರ ಗೆಜೆಟೆಡ್ ಪ್ರೊಬೇಷನರಿ ಅಭ್ಯರ್ಥಿಗಳಿಗೆ 2023-24 ರ ಗೆಜೆಟೆಡ್ ಪ್ರೊಬೇಷನರ್ ನೇಮಕಾತಿಗೆ ಅರ್ಜಿ ಸಲ್ಲಿಸಲು ಹೆಚ್ಚುವರಿಯಾಗಿ 15 ದಿನಗಳ ಕಾಲಾವಕಾಶ ನೀಡಲಾಯಿತು. |
| ತಿದ್ದುಪಡಿ ಅಧಿಸೂಚನೆ-4 ಪಿಎಸ್‌ಸಿ 1663 ಇ(1)/2024-25, ದಿನಾಂಕ: 01-10-2024 | ಪೂರ್ವಭಾವಿ ಪರೀಕ್ಷೆಯ ದಿನಾಂಕವನ್ನು ಮುಂದೂಡುವ ಕುರಿತು. |
| **ಮುಖ್ಯ ಪರೀಕ್ಷೆಯ ಅಧಿಸೂಚನೆ ಸಂಖ್ಯೆ: ಪಿಎಸ್ ಸಿ 2474ಇ(1) /2024-25, ದಿನಾಂಕ: 13-02-2025** | ಪೂರ್ವಭಾವಿ ಪರೀಕ್ಷೆಯಿಂದ ಮುಖ್ಯ ಪರೀಕ್ಷೆಗೆ 1:15 ಅನುಪಾತದಲ್ಲಿ ಅರ್ಹರಾದ ಅಭ್ಯರ್ಥಿಗಳಿಗೆ ಮುಖ್ಯ ಪರೀಕ್ಷೆಗೆ ಅರ್ಜಿ ಸಲ್ಲಿಸಲು ದಿನಾಂಕವನ್ನು ತಿಳಿಸುವ ಕುರಿತು. |
| ತಿದ್ದುಪಡಿ ಅಧಿಸೂಚನೆ ಪಿಎಸ್ ಸಿ 2588 ಇ(1) /2024-25, ದಿನಾಂಕ:27-02-2025 | ಮಾನ್ಯ ಕರ್ನಾಟಕ ಆಡಳಿತ ಮಂಡಳಿಯ ಅರ್ಜಿ ಸಂಖ್ಯೆ: 285/2025ರ ದಿನಾಂಕ: 25-02-2025ರ ಆದೇಶದ ಮೇರೆಗೆ ಅಭ್ಯರ್ಥಿಗಳು ಮುಖ್ಯ ಪರೀಕ್ಷೆಗೆ ಅರ್ಜಿ ಸಲ್ಲಿಸುವ ದಿನಾಂಕವನ್ನು 27-02-2025 ರಿಂದ 13-03-2025ರವರೆಗೆ ವಿಸ್ತರಿಸಿರುವ ಕುರಿತು. |

ಸರ್ಕಾರದ ಸುತ್ತೋಲೆ ಸಂಖ್ಯೆ:ಸಿಆಸುಇ 388 ಸೇನೆನಿ 2024 ಭಾ-3 ದಿನಾಂಕ: 04-09-2025 ರನ್ವಯ ಸದರಿ ನೇಮಕಾತಿಗೆ ಯಾವುದೇ ತಿದ್ದುಪಡಿ ಅಧಿಸೂಚನೆಯನ್ನು ದಿನಾಂಕ:28-10-2024ರ ನಂತರ ಆಯೋಗವು ಹೊರಡಿಸಿರುವುದಿಲ್ಲ. ಸದರಿ ದಿನಾಂಕದ ನಂತರ ದಿನಾಂಕ:13-02-2025 ರಂದು ಮುಖ್ಯ ಪರೀಕ್ಷೆಗೆ ಮಾತ್ರ ಅಧಿಸೂಚನೆಯನ್ನು ಹೊರಡಿಸಿದ್ದು, ಸದರಿ ಪ್ರಕ್ರಿಯೆಯು ನೇಮಕಾತಿಯ ಮುಂದುವರೆದ ಭಾಗವಾಗಿರುತ್ತದೆ. ಆದ್ದರಿಂದ ಸರ್ಕಾರದ ಒಳಮೀಸಲಾತಿಯ ಆದೇಶವನ್ನು ಸದರಿ ನೇಮಕಾತಿಗೆ ಅಳವಡಿಸಿರುವುದಿಲ್ಲ. ಆದ್ದರಿಂದ ಸದರಿ ನೇಮಕಾತಿಯನ್ನು ರದ್ದುಪಡಿಸಿರುವುದಿಲ್ಲ.

**ಕಡತ ಸಂಖ್ಯೆ: ಸಿಆಸುಇ 390 ಸೇನೆನಿ 2025**

(ಸಿದ್ದರಾಮಯ್ಯ)
ಮುಖ್ಯಮಂತ್ರಿ

ಅನುಬಂಧ - 1

**ಕರ್ನಾಟಕ ಸರ್ಕಾರ**

ಸಂಖ್ಯೆ: ಸಿಆಸುಇ 388 ಸೇನೆನಿ 2024 ಭಾ-3

ಕರ್ನಾಟಕ ಸರ್ಕಾರದ ಸಚಿವಾಲಯ
ವಿಧಾನ ಸೌಧ
ಬೆಂಗಳೂರು, ದಿನಾಂಕ: 4.09.2025

**ಸುತ್ತೋಲೆ**

**ವಿಷಯ:** ನೇರ ನೇಮಕಾತಿಗಾಗಿ ಹೊರಡಿಸಿರುವ ಅಧಿಸೂಚನಗಳನ್ನು ರದ್ದುಪಡಿಸುವ ಬಗ್ಗೆ.
**ಉಲ್ಲೇಖ:** ಸುತ್ತೋಲೆ ಸಂಖ್ಯೆ: ಸಿಆಸುಇ 388 ಸೇನೆನಿ 2024, ದಿನಾಂಕ: 25.11.2024, 29.03.2025 ಮತ್ತು 11.04.2025

******

ದಿನಾಂಕ: 04.09.2025 ರಂದು ನಡೆದ ಸಚಿವ ಸಂಪುಟ ಸಭೆಯಲ್ಲಿ ತೆಗೆದುಕೊಂಡ ತೀರ್ಮಾನದಂತೆ,

'ಉಲ್ಲೇಖಿತ ಸುತ್ತೋಲೆಗಳಲ್ಲಿ ನೀಡಲಾಗಿರುವ ಸೂಚನೆಗಳ ಕಡೆಗೆ ಗಮನಸೆಳೆಯುತ್ತಾ, ದಿನಾಂಕ: 28.10.2024 ರಂದು ನಡೆದ ಸಚಿವ ಸಂಪುಟ ಸಭೆಯಲ್ಲಿ ತೆಗೆದುಕೊಂಡ ತೀರ್ಮಾನದಂತೆ, ದಿನಾಂಕ: 28.10.2024ರ ನಂತರ ಸರ್ಕಾರದ ಯಾವುದೇ ಇಲಾಖೆ/ಮಂಡಳಿ/ನಿಗಮ/ಸ್ವಾಯತ್ತ ಸಂಸ್ಥೆಗಳ ಹುದ್ದೆಗಳಿಗೆ ನೇರ ನೇಮಕಾತಿಗಾಗಿ ಸಂಬಂಧಿಸಿದ ನೇಮಕಾತಿ ಪ್ರಾಧಿಕಾರಗಳು ಹೊರಡಿಸಿದ ಅಧಿಸೂಚನೆಗಳನ್ನು ರದ್ದುಗೊಳಿಸಿ, ಪರಿಶಿಷ್ಟ ಜಾತಿ ಒಳಮೀಸಲಾತಿಯನ್ನು ಅಳವಡಿಸಿಕೊಂಡು ಕಾಲಬದ್ಧವಾಗಿ (Time Bound) ಹೊಸದಾಗಿ ನೇಮಕಾತಿ ಅಧಿಸೂಚನೆ ಹೊರಡಿಸುವಂತೆ ಸೂಚಿಸಿದೆ.

ಮುಂದುವರೆದು, ದಿನಾಂಕ: 28.10.2024ರ ಹಿಂದೆ ನೇರ ನೇಮಕಾತಿಗಾಗಿ ಅಧಿಸೂಚನೆ ಹೊರಡಿಸಿ, ದಿನಾಂಕ: 28.10.2024ರ ನಂತರ ಸರ್ಕಾರದ ಯಾವುದೇ ಇಲಾಖೆ/ಮಂಡಳಿ/ನಿಗಮ/ಸ್ವಾಯತ್ತ ಸಂಸ್ಥೆಗಳ ಹುದ್ದೆಗಳಿಗೆ ನೇರ ನೇಮಕಾತಿಗಾಗಿ ಸಂಬಂಧಿಸಿದ ನೇಮಕಾತಿ ಪ್ರಾಧಿಕಾರಗಳು ಯಾವುದಾದರೂ ತಿದ್ದುಪಡಿ ಅಧಿಸೂಚನೆಗಳನ್ನು ಹೊರಡಿಸಿದ್ದಲ್ಲಿ ಅಂತಹ ಎಲ್ಲಾ ನೇಮಕಾತಿ ಅಧಿಸೂಚನೆಗಳನ್ನೂ ಸಹ ರದ್ದುಗೊಳಿಸಿ, ಪರಿಶಿಷ್ಟ ಜಾತಿ ಒಳ ಮೀಸಲಾತಿಯನ್ನು ಅಳವಡಿಸಿಕೊಂಡು ಹೊಸದಾಗಿ ನೇಮಕಾತಿ ಅಧಿಸೂಚನೆ ಹೊರಡಿಸಬೇಕೆಂದೂ ಸಹ ಹಾಗು ಕಾಲಬದ್ಧವಾಗಿ (Time Bound) ನೇಮಕಾತಿ ಪ್ರಕ್ರಿಯೆಗಳನ್ನು ಪೂರ್ಣಗೊಳಿಸಲು ಎಲ್ಲಾ ನೇಮಕಾತಿ ಪ್ರಾಧಿಕಾರಗಳಿಗೆ /ಆಯ್ಕೆ ಪ್ರಾಧಿಕಾರಗಳಿಗೆ ಸೂಚಿಸಲಾಗಿದೆ.

4-9-2025
**(ವೀರಭದ್ರ)**
ಸರ್ಕಾರದ ಅಧೀನಕಾರ್ಯದರ್ಶಿ
ಸಿಆಸು ಇಲಾಖೆ (ಸೇವಾ ನಿಯಮಗಳು)

**ಇವರಿಗೆ:**
ಸಂಕಲನಕಾರರು, ಇ-ರಾಜ್ಯಪತ್ರ

**ಪ್ರತಿ:**

1. ಸರ್ಕಾರದ ಮುಖ್ಯ ಕಾರ್ಯದರ್ಶಿಯವರು.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರು.
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರು ಹಾಗೂ ಅಭಿವೃದ್ಧಿ ಆಯುಕ್ತರು.
4. ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಗಳು/ಪ್ರಧಾನ ಕಾರ್ಯದರ್ಶಿಗಳು/ ಕಾರ್ಯದರ್ಶಿಗಳು
5. ಮಾನ್ಯ ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿಯವರು
6. ಮಾನ್ಯ ರಾಜ್ಯಪಾಲರ ವಿಶೇಷ ಕಾರ್ಯದರ್ಶಿಯವರು.
7. ಎಲ್ಲಾ ಇಲಾಖಾ ಮುಖ್ಯಸ್ಥರು/ ಎಲ್ಲಾ ಪ್ರಾದೇಶಿಕ ಆಯುಕ್ತರು/ ಎಲ್ಲಾ ಜಿಲ್ಲಾಧಿಕಾರಿಗಳು/ ಎಲ್ಲಾ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು/ ಎಲ್ಲಾ ಜಿಲ್ಲಾ ಪೊಲೀಸ್ ಅಧೀಕ್ಷಕರು.
8. *ಮಹಾ ನಿಬಂಧಕರು, ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು.

9. *ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
10. *ನಿಬಂಧಕರು, ಕರ್ನಾಟಕ ರಾಜ್ಯ ಆಡಳಿತ ನ್ಯಾಯಮಂಡಳಿ, ಕಂದಾಯ ಭವನ, ಕೆ.ಜಿ.ರಸ್ತೆ, ಬೆಂಗಳೂರು.
11. *ಕಾರ್ಯದರ್ಶಿ, ಕರ್ನಾಟಕ ಲೋಕಸೇವಾ ಆಯೋಗ, ಬೆಂಗಳೂರು.
12. ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ಪರೀಕ್ಷಾ ಪ್ರಾಧಿಕಾರ, ಬೆಂಗಳೂರು.
13. *ಕಾರ್ಯದರ್ಶಿ, ಕರ್ನಾಟಕ ವಿಧಾನ ಸಭೆ/ಪರಿಷತ್ತು, ಬೆಂಗಳೂರು.
14. ಶಾಖಾ ರಕ್ಷಾ ಕಡತ/ಬಿಡಿ ಪ್ರತಿಗಳು

ಅನುಬಂಧ-2

**ಶ್ರೀಹೆಚ್ ಎಸ್ ಗೋಪಿನಾಥ್(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆಸಂಖ್ಯೆ: 437(600)ಗೆ ಸಂಬಂಧಿಸಿದಂತೆ ರದ್ದುಪಡಿಸಲಾದ ಮಕಾತಿ ಅಧಿಸೂಚನೆಗಳ ವಿವರಗಳ ತಃಖ್ತೆ.**

| ಕ್ರ. ಸಂ | ಅಧಿಸೂಚನೆ ಸಂಖ್ಯೆ ಮತ್ತು ದಿನಾಂಕ | ಇಲಾಖೆ | ಹುದ್ದೆ | ಹುದ್ದೆಗಳ ಸಂಖ್ಯೆ | ಷರಾ |
|---|---|---|---|---|---|
| 1 | ಪಿ.ಎಸ್.ಸಿ. 507 ಆರ್.ಟಿ.ಬಿ-2/ 2023-24/3491, ದಿನಾಂಕ:14-03-2024 | ಸಾರಿಗೆ ಇಲಾಖೆ | ಮೋಟಾರು ವಾಹನ ನಿರೀಕ್ಷಕರು (ಉಳಿಕೆ ಮೂಲ ವೃಂದ) | 70 | ಸರ್ಕಾರದ ದಿ:04-09-2025ರ ಸುತ್ತೋಲೆಯನ್ವಯ ಸದರಿ ಹುದ್ದೆಗಳ ಅಧಿಸೂಚನೆಗಳನ್ನು ಆಯೋಗದ ದಿನಾಂಕ:05-12-2025ರ ಅಧಿಸೂಚನೆಯಲ್ಲಿ ರದ್ದುಪಡಿಸಲಾಗಿರುತ್ತದೆ. |
| 2 | ಪಿ.ಎಸ್.ಸಿ. 508 ಆರ್.ಟಿ.ಬಿ-2/2023-24/3492, ದಿ:14-03-2024 | ಸಾರಿಗೆ ಇಲಾಖೆ | ಮೋಟಾರು ವಾಹನ ನಿರೀಕ್ಷಕರು (ಹೈ.ಕ. ವೃಂದ) | 6 | |
| 3 | ಇ(2) 581/2023-24 ಪಿಎಸ್ ಸಿ, ದಿನಾಂಕ: 29.02.2024 | ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಇಲಾಖೆ | ಭೂಮಾಪಕರು (ಉಳಿಕೆ ಮೂಲ ವೃಂದ) | 264 | ಸರ್ಕಾರದ ಸುತ್ತೋಲೆ ಸಂಖ್ಯೆ:ಸಿಆಸುಇ 388 ಸೆನೆನಿ 2024 ಭಾ-3, ದಿನಾಂಕ:04-09-2025 ರನ್ವಯ ದಿನಾಂಕ: 28.10.2024ರ ನಂತರ ಹೊರಡಿಸಲಾಗಿರುವ ಅಧಿಸೂಚನೆ/ ಸೇರ್ಪಡೆ/ ತಿದ್ದುಪಡಿ ಅಧಿಸೂಚನೆಗಳನ್ನು ರದ್ದುಗೊಳಿಸಿ, ಪರಿಶಿಷ್ಟ ಜಾತಿ ಒಳ ಮೀಸಲಾತಿಯನ್ನು ಅಳವಡಿಸಿಕೊಂಡು ಹೊಸದಾಗಿ ನೇಮಕಾತಿ ಅಧಿಸೂಚನೆಗಳನ್ನು ಹೊರಡಿಸಬೇಕಾಗಿರುತ್ತದೆ. ಆದ್ದರಿಂದ, ಭೂ ಮಾಪನ ಕಂದಾಯ ವ್ಯವಸ್ಥೆ ಮತ್ತು ಭೂ ದಾಖಲೆಗಳ ಇಲಾಖೆಯಲ್ಲಿನ ಭೂಮಾಪಕರ ಹುದ್ದೆಗಳ ನೇಮಕಾತಿಗೆ ಸಂಬಂಧಿಸಿದಂತೆ ಆಯೋಗದಿಂದ ಪ್ರಕಟಿಸಲಾದ ಅಧಿಸೂಚನೆ/ಸೇರ್ಪಡೆ/ತಿದ್ದುಪಡಿ ಅಧಿಸೂಚನೆಗಳನ್ನು ದಿನಾಂಕ:19-11-2025ರ ಆಯೋಗದ ಅಧಿಸೂಚನೆಗಳಲ್ಲಿ ರದ್ದುಗೊಳಿಸಲಾಗಿರುತ್ತದೆ. |
| 4 | ಸೇರ್ಪಡೆ ಅಧಿಸೂಚನೆ ಸಂಖ್ಯೆ: ಇ(2)1023/2024-25 ಪಿಎಸ್ ಸಿ, ದಿನಾಂಕ: 22.11.2024 | | | 296 | |
| 5 | ಇ(2) 582/2023-24ಪಿಎಸ್ ಸಿ, ದಿನಾಂಕ: 29.02.2024 | | ಭೂಮಾಪಕರು ಹೈದ್ರಾಬಾದ್-ಕರ್ನಾಟಕ ಸ್ಥಳೀಯ ವೃಂದ | 100 | |
| 6 | ಸೇರ್ಪಡೆ ಅಧಿಸೂಚನೆ ಸಂಖ್ಯೆ: ಇ(2)1024/2024-25 ಪಿಎಸ್ ಸಿ, ದಿನಾಂಕ: 22.11.2024 | | | 90 | |

| ಕ್ರ. ಸಂ | ಅಧಿಸೂಚನೆ ಸಂಖ್ಯೆ ಮತ್ತು ದಿನಾಂಕ | ಇಲಾಖೆ | ಹುದ್ದೆ | ಹುದ್ದೆಗಳ ಸಂಖ್ಯೆ | ಷರಾ |
|---|---|---|---|---|---|
| 7 | PSC 1 RTB-3/2024 Dt:20-09-2024 ತಿದ್ದುಪಡಿ ಅಧಿಸೂಚನೆ ದಿನಾಂಕ:31/12/2024 | ಕೃಷಿ ಇಲಾಖೆ | ಕೃಷಿ ಮತ್ತು ಸಹಾಯಕ ಕೃಷಿ ಅಧಿಕಾರಿ (ಉ.ಮೂ.ವೃ) | 672 | ಸರ್ಕಾರದ ದಿನಾಂಕ:04-09-2025ರ ಸುತ್ತೋಲೆಯನ್ವಯ ಸದರಿ ಹುದ್ದೆಗಳ ಅಧಿಸೂಚನೆಗಳನ್ನು ಆಯೋಗದ ದಿನಾಂಕ:19-11-2025ರ ಅಧಿಸೂಚನೆಗಳಲ್ಲಿ ರದ್ದುಪಡಿಸಲಾಗಿರುತ್ತದೆ. |
| 8 | PSC 1 RTB-4/2024 Dt:20-09-2024 ತಿದ್ದುಪಡಿ ಅಧಿಸೂಚನೆ ದಿನಾಂಕ:31/12/2024 | ಕೃಷಿ ಇಲಾಖೆ | ಕೃಷಿ ಮತ್ತು ಸಹಾಯಕ ಕೃಷಿ ಅಧಿಕಾರಿ (ಹೈ.ಕ) | 273 | |
| 9 | ಪಿಎಸ್ ಸಿ 1640/ಇ(1)/2024-25, ದಿನಾಂಕ:18-09-2024 ತಿದ್ದುಪಡಿ ಅಧಿಸೂಚನೆ ಸಂಖ್ಯೆ: ಪಿಎಸ್ ಸಿ 2441/ಇ(1)/2024-25, ದಿನಾಂಕ:20-01-2025 | ಲೋಕೋಪಯೋಗಿ ಇಲಾಖೆ | ಸಹಾಯಕ ಕಾರ್ಯಪಾಲಕ ಅಭಿಯಂತರರು (ಗ್ರೇಡ್-1) ಗ್ರೂಪ್-ಎ (ಉಳಿಕೆ ಮೂಲ ವೃಂದ) | 30 (29+01 ಸೇವಾನಿರತ) | ಸರ್ಕಾರದ ದಿನಾಂಕ:04-09-2025ರ ಸುತ್ತೋಲೆಯಲ್ಲಿ "ದಿನಾಂಕ:28-10-2024ರ ಹಿಂದೆ ನೇರ ನೇಮಕಾತಿಗಾಗಿ ಅಧಿಸೂಚನೆ ಹೊರಡಿಸಿ, ದಿನಾಂಕ:28-10-2024ರ ನಂತರ ಸರ್ಕಾರದ ಯಾವುದೇ ಇಲಾಖೆ/ಮಂಡಳಿ/ನಿಗಮ/ಸ್ವಾಯತ್ತ ಸಂಸ್ಥೆಗಳ ಹುದ್ದೆಗಳ ನೇರ ನೇಮಕಾತಿಗಾಗಿ ಸಂಬಂಧಿಸಿದ ನೇಮಕಾತಿ ಪ್ರಾಧಿಕಾರಗಳು ಯಾವುದಾದರೂ ತಿದ್ದುಪಡಿ ಅಧಿಸೂಚನೆಗಳನ್ನು ಹೊರಡಿಸಿದ್ದಲ್ಲಿ ಅಂತಹ ಎಲ್ಲಾ ನೇಮಕಾತಿ ಅಧಿಸೂಚನೆಗಳನ್ನೂ ಸಹ ರದ್ದುಗೊಳಿಸಿ, ಪ.ಜಾ. ಒಳ ಮೀಸಲಾತಿಯನ್ನು ಅಳವಡಿಸಿಕೊಂಡು ಹೊಸದಾಗಿ ನೇಮಕಾತಿ ಅಧಿಸೂಚನೆ ಹೊರಡಿಸಬೇಕೆಂದೂ ಸಹ ಹಾಗೂ ಕಾಲಬದ್ಧವಾಗಿ ನೇಮಕಾತಿ ಪ್ರಕ್ರಿಯೆಗಳನ್ನು ಪೂರ್ಣಗೊಳಿಸಲು ಎಲ್ಲಾ ನೇಮಕಾತಿ ಪ್ರಾಧಿಕಾರಗಳಿಗೆ/ಆಯ್ಕೆ ಪ್ರಾಧಿಕಾರಗಳಿಗೆ ಸೂಚಿಸಲಾಗಿದೆ" ಎಂದು ತಿಳಿಸಲಾಗಿದ್ದು, ಸದರಿ ಸರ್ಕಾರದ ಸುತ್ತೋಲೆಯನ್ವಯ ಹಾಗೂ ಆಯೋಗದ ದಿನಾಂಕ:05-12-2025ರ ಸಭೆಯಲ್ಲಿ "ಸದರಿ ವಿಷಯದ ಕುರಿತು ಆಯೋಗದ ಸಭೆಯಲ್ಲಿ ಕೂಲಂಕಷವಾಗಿ ಚರ್ಚಿಸಲಾಗಿ, ದಿನಾಂಕ:04.12.2025ರ ಸರ್ಕಾರದ ಪತ್ರದಲ್ಲಿ ನೀಡಿರುವ ಸ್ಪಷ್ಟೀಕರಣವನ್ನು ಗಮನದಲ್ಲಿಟ್ಟುಕೊಂಡು ಮಾನ್ಯ ಉಚ್ಚ ನ್ಯಾಯಾಲಯವು W.P. No.12879/2025 ಪ್ರಕರಣದ ಮಧ್ಯಂತರ ಆದೇಶಕ್ಕೊಳಪಟ್ಟು ಸದರಿ ಅಧಿಸೂಚನೆಯನ್ನು ರದ್ದುಪಡಿಸಲು ಅನುಮೋದಿಸಲಾಯಿತು" ಎಂದು ನಿರ್ಣಯಿಸಲಾಗಿದ್ದು, ಸದರಿ ಆಯೋಗದ ನಿರ್ಣಯದನ್ವಯ ಸದರಿ ನೇಮಕಾತಿಯ ಅಧಿಸೂಚನೆ/ತಿದ್ದುಪಡಿ ಅಧಿಸೂಚನೆಗಳನ್ನು ದಿನಾಂಕ:05-12-2025ರಂದು ಆಯೋಗದಿಂದ ಪ್ರಕಟಿಸಲಾದ ಅಧಿಸೂಚನೆಗಳಲ್ಲಿ ರದ್ದುಪಡಿಸಲಾಗಿದೆ. |

| ಕ್ರ. ಸಂ | ಅಧಿಸೂಚನೆ ಸಂಖ್ಯೆ ಮತ್ತು ದಿನಾಂಕ | ಇಲಾಖೆ | ಹುದ್ದೆ | ಹುದ್ದೆಗಳ ಸಂಖ್ಯೆ | ಷರಾ |
|---|---|---|---|---|---|
| 10 | ಪಿಎಸ್ ಸಿ 1639/ಇ(1)/2024-25, ದಿನಾಂಕ:18-09-2024 ತಿದ್ದುಪಡಿ ಅಧಿಸೂಚನೆ ಸಂಖ್ಯೆ: ಪಿಎಸ್ ಸಿ 2440/ಇ(1)/2024-25, ದಿನಾಂಕ:20-01-2025 | ಲೋಕೋಪಯೋಗಿ ಇಲಾಖೆ | ಸಹಾಯಕ ಕಾರ್ಯಪಾಲಕ ಅಭಿಯಂತರರು (ಗ್ರೇಡ್-1) ಗ್ರೂಪ್-ಎ (ಹೈದ್ರಾಬಾದ್-ಕರ್ನಾಟಕ ವೃಂದ) | 12 (11+01 ಸೇವಾನಿರತ) | ಸರ್ಕಾರದ ದಿನಾಂಕ:04-09-2025ರ ಸುತ್ತೋಲೆಯನ್ವಯ ದಿನಾಂಕ:05-12-2025ರ ಆಯೋಗವು ಹೊರಡಿಸಿರುವ ಅಧಿಸೂಚನೆಯಲ್ಲಿ ಸದರಿ ನೇಮಕಾತಿಯ ಅಧಿಸೂಚನೆಗಳನ್ನು ರದ್ದುಪಡಿಸಲಾಗಿದೆ. |

**ಕಾರ್ಯದರ್ಶಿ,**
**ಕರ್ನಾಟಕ ಲೋಕಸೇವಾ ಆಯೋಗ**